ಶ್ರೀ ಎ. ಲಕ್ಷ್ಮಿಸಾಗರ್.—ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು.

ಅ) ತಿಳಿದಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

SRI T. S. MANI.—Sir, the roads in K.G.F., are in very bad condition and there is no proper water facility available in the Town I request the Government to see that the K.G.F Sanitary Board works effectively so that the roads and water facilities in K.G.F. town are improved

SRI A. LAKSHMI SAGAR.—Sir, it is the responsibility of the local authorities within whose jurisdiction the local authorities situate. However, on the representation of the Hon'ble Member, I will certainly ask the local authorities to attend to these civic amenities.

SRI T. S. MANI.—Sir, it is the responsibility of the Goverment also. I request the Hon'ble Minister to kindly look into this matter.

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರಕ್ಕೆ ನೇರವಾದ ಜವಾಬ್ದಾರಿ ಇಲ್ಲ. ಹಣಕಾಸಿನ ಸಹಾಯ ಬೇಕಾದರೂ ಬೇಕಾದಲ್ಲಿ, ಡೆವಲಪ್‌ಮೆಂಟ್ ಗ್ರಾಂಟ್ ಮೂಲಕ ಕೊಡುವುದಕ್ಕೆ ವ್ಯವಸ್ಥೆ ಇದೆ. ಅಲ್ಲಿ ಈಗ ಆ ಸಂಸ್ಥೆಗಳಿಗೆ ತಾವು ವಿಷಯಗಳನ್ನು ಒಟ್ಟಾಗಿ ಸೇರಿಸಿ ಒಂದು ಮಾಡಬೇಕೆಂದಿದ್ದೇವೆ. ಅವರೆ, ಅಲ್ಲಿ ಆದಕ್ಕೆ ಒಮ್ಮತ ಬರಲಿಲ್ಲ. ಅಲ್ಲಿನ ಆ ಅಥಾರಿಟಿಗಳನ್ನು ಒಟ್ಟಾಗಿ ಮಾಡಲು ಆ ಸಂಸ್ಥೆಗಳ ಒಮ್ಮತ ಪಡೆಯಲು ಪ್ರಯತ್ನ ನಡೆದಿದೆ.

ಅಧ್ಯಕ್ಷರು.—ಶ್ರೀ ಎಸ್.ಕೆ. ಕಾಂತಾ ಅವರ ಪ್ರಶ್ನೆ ಸಂಖ್ಯೆ ೩೬(೨೬೩)ನ್ನು ಮುಂದೂಡಲಾಗಿದೆ.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಸ್ಥಾಯಿದಳ ಮತ್ತು ನೇಮಕಾತಿ ನಿಯಮಗಳಿಗೆ ಕೆಲವು ಹುದ್ದೆಗಳನ್ನು ಸೇರಿಸುವ ಬಗ್ಗೆ.

೩೦೭. ಶ್ರೀ ಸಿ.ಎನ್. ಭಾಸ್ಕರಪ್ಪ (ಬಳ್ಳಾರಿ).—ಮಾನ್ಯ ಭಾರಿ ಮಂತ್ರಿ ಮಹೋದಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಯಾವುದೇ ನಿರ್ದಿಷ್ಟ ಅಧಿಕಾರದ ಶ್ರೇಣಿಯಲ್ಲಿ ಈ ಕೆಳಕಂಡ ಹುದ್ದೆಗಳನ್ನು ಸೇರಿಸಲಾಗಿದೆಯೇ ?

೧ ಸಣ್ಣ ಪ್ರಮಾಣದ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿನ ಫೋರ್‌ಮನ್ ಮತ್ತು ಶಿಕ್ಷಕರು (ಡಿಪ್ಲೊಮೋ)

೨ ಜಿಲ್ಲಾ ನೇಯ್ಗೆ ಮೆಲ್ವಿಚಾರಕರು(ಪರಿವೀಕ್ಷಕರು)

೩ ಕೈಗಾರಿಕಾ ಅಭಿವೃದ್ಧಿ ಅಧಿಕಾರಿಗಳು

೪ ಜೇನು ಸಾಕಣಿಕೆ ನಿರ್ದೇಶಕ ಉಪಾಧ್ಯಾಯ

ಆ) ಹಾಗಿಲ್ಲದಿದ್ದಲ್ಲಿ, ಸದರಿ ಹುದ್ದೆಗಳನ್ನು ಸೇರಿಸಲಾಗುವುದೆ.

ಶ್ರೀ ಜೆ.ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಎ) ಹೌದು. ಈ ಹುದ್ದೆಗಳು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿವೆ.

ಆದರೆ ಕ್ರಮ ಸಂಖ್ಯೆ ೧, ೩ ಮತ್ತು ೪ರಲ್ಲಿಯ ಹುದ್ದೆಗಳು ಈತನಕ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸ್ಥಾಯಿಯಾದಳ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರ್ಪಡೆಯಾಗಿಲ್ಲ.

ಕ್ರಮ ಸಂಖ್ಯೆ ೨ರಲ್ಲಿಯ ಹುದ್ದೆಯು ಸ್ಥಾಯಿದಳ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರಿದೆ.

ಬಿ) ಹೌದು. ಈಗಾಗಲೇ ಈ ಪ್ರಶ್ನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಸಿ.ಎನ್. ಭಾಸ್ಕರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಈ ತರಬೇತಿ ಶಿಕ್ಷಕರು ಈಗಾಗಲೇ ಸುಮಾರು ೨೦ ರಿಂದ ೨೬ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಅವರುಗಳಿಗೆ ಯಾವುದೇ ಪ್ರಮೋಟಿಷ್ ಇಲ್ಲ. ಅವರು ಅದೇ ಉದ್ಯೋಗದಲ್ಲಿ ಇರ್ತಾರೆ. ಈಗ ಕರ್ನಾಟಕದಲ್ಲಿ ೨-೩ ವರ್ಷಗಳಿಂದ ಕೈಗಾರಿಕಾ ಕ್ರಾಂತಿ ಆಗಿರುತ್ತೆದೆ. ಅವರುಗಳಿಗೆ ಕೆಲಸ ಕಾರ್ಯಗಳು ಜಾಸ್ತಿಯಾಗಿವೆ. ಅವರಿಗೆ ಉತ್ತಮವಾದ ಸೌಲಭ್ಯಗಳನ್ನು ಕೊಡುವುದು ಸೂಕ್ತವಾಗಿದೆ. ತಾವು ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಜೆ.ಹೆಚ್. ಪಟೇಲ್.—ಇದಕ್ಕೆ ಸುಮಾರು ೨೦ ವರ್ಷಗಳ ಕಾರಣ ಇದೆ. ೧೯೭೮ರಲ್ಲಿ ಆಗ ಡಿಸ್ಟ್ರಿಕ್ಟ್ ಇಂಡಸ್ಟ್ರೀಸ್ ಸೆಂಟರ್ ಸ್ಥಾಪನೆ ಮಾಡುವ ಬಗ್ಗೆ ಕೇಂದ್ರ ಸರ್ಕಾರವು ತೀರ್ಮಾನ ಮಾಡಿತು. ಈ ಹುದ್ದೆಗಳನ್ನು ಸಿ ಅಂಡ್ ಆರ್ ರೂಲ್ಸ್‌ನಲ್ಲಿ ಅಳವಡಿಸಿದ್ದೇವೆ. ಈ ಸಣ್ಣ ಪ್ರಮಾಣದ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿನ ಪೋರ್‌ಮನ್ ಮತ್ತು ಶಿಕ್ಷಕರು (ಡಿಪ್ಲೊಮೋ), (೨) ಜಿಲ್ಲಾ ನೇಯ್ಗೆ ಮೇಲ್ವಿಚಾರಕರು (ಪರಿವೀಕ್ಷಕರು) (೩) ಕೈಗಾರಿಕಾ ಅಭಿವೃದ್ಧಿ ಅಧಿಕಾರಿಗಳು, ಮತ್ತು (೪) ಜೀನು ಸಾಕಾಣಿಕೆ ನಿರ್ದೇಶಕ ಉಪಾಧ್ಯಾಯ, ಈ ೪ ಹುದ್ದೆಗಳು ಏನಿವೆ, ಇವುಗಳು ಇದುವರೆವಿಗೂ ರೂಲ್ಸ್‌ನಲ್ಲಿ ಇರಲಿಲ್ಲ. ಇನ್ನು ಮುಂದೆ ಸೇರಿಸುತ್ತೇವೆ.

ರಾಜ್ಯದಲ್ಲಿರುವ ವಾಹನಗಳ ಸಂಖ್ಯೆ

೩೬೫. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ರಾಜ್ಯದಲ್ಲಿರುವ ಖಾಸಗಿ, ಸರಕಾರಿ ಮತ್ತು ಇತರ ಎಲ್ಲಾ ತರಹದ ಮೋಟಾರು ವಾಹನಗಳೆಷ್ಟು, ಹಾಗೂ ಅವುಗಳಲ್ಲಿ ಬಸ್ಸು, ಲಾರಿ ಮತ್ತು ಟೆಂಪೋ, ತ್ರಿಚಕ್ರ ವಾಹನಗಳು ಹಾಗೂ ದ್ವಿಚಕ್ರ ವಾಹನಗಳೆಷ್ಟು ?

ಬಿ) ಹಾಗಿದ್ದಲ್ಲಿ ೧೯೮೦ರಲ್ಲಿ ಎಷ್ಟಿದ್ದವು? ಹಾಗು ೧೯೮೫ರಲ್ಲಿ ಎಷ್ಟಿದೆ ?

ಸಿ) ಬೆಂಗಳೂರು ಮೆಟ್ರೋಪಾಲಿಟನ್ ಏರಿಯಾದಲ್ಲಿರುವ ಮೇಲ್ಕಂಡಂತಹ ವಾಹನಗಳೆಷ್ಟು ?

ಡಿ) ರಾಜ್ಯದಲ್ಲಿ ೧೯೮೦ ರಲ್ಲಿದ್ದ ವಾಹನ ಕಂಟ್ರೋಲ್ ಮಾಡುವ ಸಿಬ್ಬಂದಿ ಎಷ್ಟು ?

ಇ) ೧೯೮೦ ರಲ್ಲಿದ್ದ ರಾಜ್ಯದಲ್ಲಿನ ಕಛೇರಿಗಳೆಷ್ಟು ಹಾಗೂ ಸಿಬ್ಬಂದಿ ಎಷ್ಟು ? ೧೯೮೦ ರಲ್ಲಿ ಹೆಚ್ಚಿಸಲಾಗಿದೆಯೇ ?

ಎಫ್) ಬೆಂಗಳೂರಿನಲ್ಲಿರುವ ಕಛೇರಿಗಳು ೧೯೮೦ ರಲ್ಲಿ ಎಷ್ಟಿತ್ತು, ಈಗ ಎಷ್ಟಿವೆ ?

ಜಿ) ವಾಹನಗಳ ಸಂಖ್ಯೆ ಬೆಳೆದಿರುವುದನ್ನು ಗಮನಿಸಿತಕ್ಕ ಪ್ರಮಾಣದಲ್ಲಿ ಬೆಂಗಳೂರು ಮತ್ತು ರಾಜ್ಯದ ಇತರೆ ಕಡೆಗಳಲ್ಲಿ ಹೆಚ್ಚಿನ ಕಛೇರಿಗಳನ್ನು ಸ್ಥಾಪಿಸಿ ಹೆಚ್ಚಿನ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಸರ್ಕಾರದವರು ಇಚ್ಛಿಸಿದ್ದಾರೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು),—

ಎ) (೧) ೬,೭೬,೯೪೪ (೩೧-೩-೧೯೮೬ ರಂದ